**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ.1083/2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ವಿಠಲ್.ಎಸ್.ಅಂತಪುರ** | | |
| **ಗಂಡಃತಂದೆಃಹೆಸರು** | **ಹನುಮಂತ** | **ಪಿಡಬ್ಲೂಃ** | 3 |
| **ವಯಸ್ಸು** | **31 ವರ್ಷ** | **ಸಿಡಬ್ಲೂಃ** | 4 |
| **ಉದ್ಯೋಗಃ** | **ಅಬಕಾರಿ ಪೇದೆ** | | |
| **ವಾಸ ಸ್ಥಳಃ** | **ಬೀಳಗಿ ತಾಲ್ಲೂಕು,<br>ಬಾಗಲಕೋಟೆ** | | |

**<u>ದಿನಾಂಕ 09-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-</u>**

ನಾನು 2019 ರಿಂದ 2023 ರವರೆಗೆ ಚಿಂತಾಮಣಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08-12-2020 ರಂದು ಗ್ರಾಮ ಪಂಚಾಯ್ತಿ ಸಾರ್ವತ್ರಿಕ ಚುನಾವಣೆ 2020 ರ ನಿಮಿತವಾಗಿ ಅಬಕಾರಿ ನಿರೀಕ್ಷರೊಂದಿಗೆ ಮತ್ತು ಸಿಬ್ಬಂದಿಯವರೊಂದಿಗೆ ಗಸ್ತು ಕರ್ತವ್ಯಕ್ಕೆ ಹೋಗಿದ್ದಾಗ ಅಬಕಾರಿ ನಿರೀಕ್ಷಕರಿಗೆ ಬಾತ್ಮಿ ಬಂದಿದ್ದು, ದ್ವಿಚಕ್ರ ವಾಹನ ಕೆಎ 40-ಯು-6644 ಟಿ ವಿ ಎಸ್ ಎಕ್ಸ್ ಎಲ್ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಣಿಕೆ ಮಾಡುತ್ತಿದ್ದಾರೆ ಎಂದರೆ ಮಾಹಿತಿ ಬಂದಿದ್ದು, ಆಗ ಸಮಯ ಸಂಜೆ 5-45 ಗಂಟೆ ಆಗಿದ್ದು, ನಾವು ಚಿಂತಾಮಣಿಯಿಂದ ಚೇಳೂರು ರಸ್ತೆಗೆ ಹೋಗುವ ವಾಹನಗಳನ್ನು ವೀಕ್ಷಣೆ ಮಾಡುತ್ತಾ ಸೋಮಯಾಚನಹಳ್ಳಿ , ಕನಿಶೆಟ್ಟಿಹಳ್ಳಿ ವೃತ್ತದಲ್ಲಿ ವಾಹನವನ್ನು ನಿಲ್ಲಿಸಿ ಅಲ್ಲಿ ಕಾಯುತ್ತಿದ್ದಾಗಕೆಎ 40-ಯು-6644 ಟಿ ವಿ

ಎಸ್ ಎಕ್ಸ್ ಎಲ್ ವಾಹನ ಬಂದಿದ್ದು, ಅದನ್ನು ವಿಚಾರಿಸಲಾಗಿ ಬಾತ್ಮಿ ಬಂದ ವಾಹನವು ಅದೇ ಇರುತ್ತದೆ. ವಾಹನದಲ್ಲಿ ಒಂದು ಬಿಳಿ ಚೀಲದ ಮೂಟೆ ಇರುತ್ತದೇ, ಆತನನ್ನು ವಿಚಾರಿಸಲಾಗಿ ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದಾಗಿ ಹೇಳುತ್ತಾನೆ. ಮೂಟೆಯನ್ನು ನೋಡಲಾಗಿ ಅದರಲ್ಲಿ 180 ಎಂ ಎಲ್ ನ 48 ಓಲ್ಡ್ ಟವರಿನ್ ವಿಸ್ಕಿ ಟೆಟ್ರಾ ಪ್ಯಾಕೇಟುಗಳಿದ್ದು , ಆತನನ್ನು ಸಾಗಾಣಿಕೆ ಮಾಡಲು ಪರವಾನಗಿ ಇದೆಯಾ ಎಂದರೆ ಕೇಳಲಾಗಿ ಆತನು ಯಾವುದೇ ರೀತಿ ಪರವಾನಗಿ ಇಲ್ಲ ಎಂದು ಹೇಳಿರುತ್ತಾನೆ. ರಸ್ತೆ ಬದಿಯಲ್ಲಿ ಹೋಗುತ್ತಿದ್ದ ಜನರನ್ನು ವಿಚಾರಿಸಿದಾಗ ಅವರು ಪಂಚರಾಗಲು ಸಹಕರಿಸಿರುವುದಿಲ್ಲ. ಆಗ ಇಲಾಖೆ ಸಿಬ್ಬಂದಿಯವರನ್ನು ಪಂಚರನ್ನಾಗಿ ಮಾಡಿಕೊಂಡು, ಕಾಲಾವಕಾಶ ಇಲ್ಲದೇ ಇರುವುದರಿಂದ ಸರ್ಚ್ ವಾರಂಟ್ ನ್ನು ಸ್ಥಳದಲ್ಲಿಯೇ ತಯಾರಿಸಿಕೊಳ್ಳಲಾಯಿತು. 14 ಟೆಟ್ರಾ ಪ್ಯಾಕೇಟುಗಳನ್ನು ಮಾಲುಗಳ ಪೈಕಿ ಅಲಾದೆಯಾಗಿ ಒಂದೊಂದು ಪ್ಯಾಕೇಟ್ ಮತ್ತು ಬಾಟಲ್ ನ್ನು ಎಫ್ ಎಸ್ ಎಲ್ ಪರೀಕ್ಷೆಗೆ ತೆಗೆದುಕೊಂಡು ಅವುಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲು ಮಾಡಿ. ಪಂಚರ ಸಹಿಯನ್ನು ಮಾದರಿಗೆ ಅಂಟಿಸಲಾಯಿತು. ಮಾದರಿ ಸೀಲನ್ನು ತಯಾರಿಸಲಾಯಿತು. ಆರೋಪಿಯನ್ನು ಮತ್ತು ಉಳಿದ ಮಾಲನ್ನು, ವಾಹನವನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ದಿಃ 04-01-2021 ರಂದು ರಾಸಾಯನಿಕ ಪರೀಕ್ಷೆ ವರದಿಯನ್ನು ನೀಡಿ ದಿಃ 03-02-2021 ರಂದು ವರದಿಯನ್ನು ತಂದು ನೀಡಿರುತ್ತೇನೆ. ಆರೋಪಿಯ ಹೆಸರನ್ನು ವಿಚಾರಿಸಲಾಗಿ ಸುಬಾನ್ ಬಿನ್ ಬಾಬಾ ಸಾಬೀ ಎಂದು ತಿಳಿದು ಬಂದಿತು. ಸಾಕ್ಷಿಯು ನ್ಯಾಯಾಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಕೃತ್ಯ ನಡೆದ ಸ್ಥಳದಲ್ಲಿ ಸಂಜೆ 6.00-7.00 ಗಂಟೆ ವರೆಗೆ ಪಂಚನಾಮೆಯನ್ನು ಬರೆಯಲಾಯಿತು. ಸಾಕ್ಷಿಗೆ ನಿಪಿ 1 ನ್ನು ತೋರಿಸಲಾಗಿ ಸಾಕ್ಷಿಯು

ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 14 ಟೆಟ್ರಾ ಪ್ಯಾಕೇಟುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮೂ ಮಾ 1 ರಿಂದ 14 ಎಂದು ಗುರುತಿಸಲಾಯಿತು. ಸಾಕ್ಷಿಯು 30-12-2020 ರ ಅರ್ಜಿಯನ್ನು ನೋಡಿ ಗುರುತಿಸಿದ್ದು, ಅರ್ಜಿಯನ್ನು ನಿಪಿ-2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಲಾಯಿತು. ಸಾಕ್ಷಿಯು 03-02-2021 ರ ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು, ಎಫ್ ಎಸ್ ಎಲ್ ವರದಿಯನ್ನು ನಿಪಿ-3 ಎಂದು ಗುರುತಿಲಾಯಿತು.

**ಪಾಟೀಸವಾಲುಃ ಶ್ರೀ.ಎಂ.ವಿ.ಎಂ ಆರೋಪಿ ಪರ ವಕೀಲರಿಂದಃ-**

ಗಸ್ತು ಕರ್ತವ್ಯಕ್ಕೆ ನೇಮಕ ಮಾಡಲು ನಮಗೆ ಲಿಖಿತವಾಗಿ ಬಂದಿತ್ತಾ ಎಂದರೆ ಇಲ್ಲ. ಗಸ್ತು ಕರ್ತವ್ಯಕ್ಕೆ ಆ ದಿನ ಚಾಸಾ 1 ರಿಂದ 3 ಮತ್ತು 5 ರವರು ಬಂದಿದ್ದರು. ಠಾಣೆಯಿಂದ ಯಾವಾಗ ಬಿಟ್ಟಿರಿ ಎಂದರೆ ಸಂಜೆ 4.00 ಗಂಟೆಗೆ ಹೋದೇವು. ನಾವು ಠಾಣೆಯಿಂದ ಘಟನಾ ಸ್ಥಳಕ್ಕೆ ಯಾವ ಮಾರ್ಗವಾಗಿ ಹೋದಿರಿ ಎಂದರೆ ಚೇಳೂರಿನಿಂದ ಹೋದೇವು. ಘಟನಾ ಸ್ಥಳದಲ್ಲಿ ಬಹಳ ಜನ ಇರುತ್ತಾರೆ ಎಂದರೆ ಹೌದು. ಆ ದಿನ ಎಷ್ಟು ಜನ ಸೇರಿದ್ದರು ಎಂದರೆ ನನಗೆ ನೆನಪಿಲ್ಲ. 10-12 ಜನ ಇರಬಹುದು. ಘಟನಾ ಸ್ಥಳಕ್ಕೆ ಎಷ್ಟು ಸಮಯಕ್ಕೆ ಹೋದಿರಿ ಎಂದರೆ 5-15 ಆಗಿರಬಹುದು. ಘಟನಾ ಸ್ಥಳಕ್ಕೆ ಚಿಂತಾಮಣಿಯಿಂದ ನೇರವಾಗಿ ಹೋಗಿದ್ದೀರಾ ಎಂದರೆ ಇಲ್ಲ ಹಳ್ಳಿ ಹಳ್ಳಿಗೆ ಗಸ್ತು ಮಾಡುತ್ತಾ ಹೋದೇವು. ಸಾರ್ವಜನಿಕರನ್ನು ಪಂಚನಾಮೆಗೆ ಬರಲು ಕೇಳಿದರಾ ಎಂದರೆ ಅವರು ಸಹಕರಿಸಲಿಲ್ಲ. ಶೋಧನೆ ಮಾಡುವಾ ಮುಂಚೆ ವೈಯಕ್ತಿಕ ಅಂಗ ಶೋಧನೆ ಮಾಡಿದರಾ ಎಂದರೆ ಹೌದು. ಮೂ ಮಾ 1 ರಿಂದ 14 ರ ಮೇಲೆ ಸಾಕ್ಷಿಗಳ ಸಹಿ ಇಲ್ಲ ಎಂದರೆ ಸರಿಯಲ್ಲ. ನನ್ನ ಸಹಿ

ಬಿಟ್ಟು ಬೇರೆ ಯಾರದು ಇಲ್ಲ ಎಂದರೆ ಚಾಸಾ 2 ರವರ ಸಹಿ ಇರುತ್ತದೆ. ಬಿಡಿ ಬಿಡಿಯಾಗಿ ಪ್ರತಿಯೊಂದರ ಮೇಲೂ ಸಹಿ ಪಡೆದಿಲ್ಲ ಎಂದರೆ ಹೌದು. ನಾನು ಪರೀಕ್ಷೆ ಎಲ್ಲಾ ಟೆಟ್ರಾ ಪ್ಯಾಕೇಟುಗಳನ್ನು ಕಳುಹಿಸಿಲ್ಲ ಎಂದರೆ ಹೌದು. ವಾಹನವನ್ನು ಪಂಚನಾಮೆ ಮಾಡಿದಿರಾ ಎಂದರೆ ಇಲ್ಲ ಪ್ರತ್ಯೇಕವಾಗಿ ಮಾಡಿಲ್ಲ. ನಾನು ಆ ದಿನ ಗಸ್ತು ಕರ್ತವ್ಯಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯ ಸಾಗಣಿಕೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾವುಠಾಣೆಯಲ್ಲೆ ಎಲ್ಲಾ ದಾಖಲೆಗಳನ್ನು ಬನಾವಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಎಫ್ ಎಸ್ ಎಲ್ ವರದಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.